ಚಿಕ್ಕಮಗಳೂರು-ಮಂಗಳೂರು ನಡುವೆ ಸೇತುವೆ ನಿರ್ಮಾಣ

832 - ಶ್ರೀ ಸಿ.ಆರ್. ಸಗೀರ್ ಅಹಮದ್ (ಚಿಕ್ಕಮಗಳೂರು) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) *ಚಿಕ್ಕಮಗಳೂರು ನಗರದಲ್ಲಿ1997ನೇ ಸಾಲಿನಿಂದ ಸೆಪ್ಟೆಂಬರ್ ಮತ್ತು ಅಕ್ಟೋಬರ್‌ನಲ್ಲಿ ಬಾರಿ ಮಳೆ ಬಿದ್ದು ಚಿಕ್ಕಮಗಳೂರು ಮತ್ತು ಮಂಗಳೂರು ರಸ್ತೆಯಲ್ಲಿ ಒಂದು ದೊಡ್ಡ ಸೇತುವೆ ಕೊಚ್ಚಿಕೊಂಡು ಹೋಗಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ?*

2) *ಇದರ ಪುನರ್ ನಿರ್ಮಾಣಕ್ಕಾಗಿ ಅಂದಾಜು ಮಾಡಲಾಗಿದೆಯೇ?*

3) *ಮಾಡಿದ್ದಲ್ಲಿ ಅದರ ಅಂದಾಜು ಮೊತ್ತವೆಷ್ಟು?*

4) *ಈ ಸೇತುವೆ ಕೆಲಸಕ್ಕಾಗಿ ಸರ್ಕಾರ ಹಣ ಬಿಡುಗಡೆ ಮಾಡಿದೆಯೇ ಮತ್ತು ಈ ಸೇತುವೆಯ ಕೆಲಸ ಯಾವಾಗಿನಿಂದ ಪ್ರಾರಂಭ ಮಾಡಲಾಗುವುದು?*

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

1) ಬಂದಿದೆ.

2) ಹೌದು. ಅಂದಾಜು ಪಟ್ಟಿಯು ತಾಂತ್ರಿಕ ಮಂಜೂರಾತಿ ಪಡೆದಿರುತ್ತದೆ.

3) ಅಂದಾಜು ಮೊತ್ತ 15.20 ಲಕ್ಷ ರೂ.ಗಳು.

4) ಮಾಡಿದೆ. ಕೆಲಸ ಈಗಾಗಲೇ ಪ್ರಾರಂಭವಾಗಿದೆ.

ಚಿಕ್ಕಮಗಳೂರು ಜಿಲ್ಲೆಯ ಪ್ರವಾಸಿ ಕೇಂದ್ರಗಳು

833 - ಶ್ರೀ ಸಿ.ಆರ್. ಸಗೀರ್ ಅಹಮದ್ (ಚಿಕ್ಕಮಗಳೂರು) : ಮಾನ್ಯ ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಚಿಕ್ಕಮಗಳೂರು ಜಿಲ್ಲೆಯಲ್ಲಿ ಯಾವ ಯಾವ ತಾಲ್ಲೂಕುಗಳಲ್ಲಿ ಪ್ರವಾಸಿ ಕೇಂದ್ರವನ್ನು ಗುರ್ತಿಸಲಾಗಿದೆ (ವಿವರ ನೀಡುವುದು)*

ಆ) *ಈ ಪ್ರವಾಸಿ ಕೇಂದ್ರಗಳ ಅಭಿವೃದ್ಧಿಗಾಗಿ ಸರ್ಕಾರ ಎಷ್ಟು ಹಣ ಮೀಸಲಿಟ್ಟಿದೆ ಹಾಗೂ ಇಲ್ಲಿಯವರೆಗೆ ಈ ಪ್ರವಾಸಿ ಕೇಂದ್ರಗಳಿಗಾಗಿ ಎಷ್ಟು ಹಣ ಖರ್ಚು ಮಾಡಲಾಗಿದೆ? ತಾಲ್ಲೂಕುವಾರು ವಿವರ ನೀಡುವುದು?*

ಇ) *1998-99ನೇ ಸಾಲಿನಲ್ಲಿ ಸರ್ಕಾರ ಯಾವ ಯಾವ ತಾಲ್ಲೂಕಿನಲ್ಲಿ ಪ್ರವಾಸಿ ಕೇಂದ್ರವನ್ನು ಅಭಿವೃದ್ಧಿ ಪಡಿಸಲು ಆಲೋಚಿಸಿದೆ?*

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು) :